# ಎಲೆ ಮನವೆ ಹರಿ ಧ್ಯಾನ ಮಾಡು

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
4. **Note:** Lyrics in all the above references are almost same.  We have considered wordings as in Ref. 1.
5. **Note:** Singer has followed lyrics as in Ref. 1.

ರಾಗ: ನಾಟ ತಾಳ: ಅಟ

ಎಲೆ ಮನವೆ ಹರಿ ಧ್ಯಾನ ಮಾಡು ‖ ಪ ‖

ಎಲೆ ಜಿಹ್ವೆ ಕೇಳು ಕೇಶವನ ಗುಣಗಳ ನುತಿಸು
ಎಲೆ ಮನವೆ ಮುರವೈರಿಯಂಘ್ರಿಗಳ ಭಜಿಸು
ಎಲೆ ಕರಗಳಿರ ಶ್ರೀಧರನ ಸೇವೆಯ ಮಾಡಿ
ಎಲೆ ಕರ್ಣಗಳಿರ ಅಚ್ಯುತನ ಕಥೆ ಕೇಳಿ ‖ ೧ ‖

ಎಲೆ ನೇತ್ರಗಳಿರ ಶ್ರೀಕೃಷ್ಣಮೂರ್ತಿಯ ನೋಡಿ
ಎಲೆ ಪಾದಗಳಿರ ಹರಿಯಾತ್ರೆಯ ಮಾಡಿ
ಎಲೆ ನಾಸಿಕವೆ ಮುಕುಂದನ ಚರಣಕೆ ಅರ್ಪಿಸಿದ
ತುಲಸಿ ಪರಿಮಳವನಾಘ್ರಾಣಿಸು ಅನುದಿನವು ‖ ೨ ‖

ಎಲೆ ಶಿರವೆ ನೀ ಕೇಳಧೋಕ್ಷಜನ ಸಿರಿ ಚರಣ
ಜಲರುಹದೊಳಳಿಯಂತೆ ಬಿಡದೆ ಓಲ್ಯಾಡು
ಎಲೆ ತನುವೆ ನೀನು ಶ್ರೀ ಪುರಂದರ ವಿಠ್ಠಲನ
ಸಲೆ ಭಕುತ ಜನರ ಸಂಗತಿಯಲ್ಲಿ ಬಾಳು ‖ ೩ ‖

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಪ್ರತಿಯೊಂದು ಇಂದ್ರಿಯವೂ ಪರಮಾತ್ಮನನ್ನು ಒಲೈಸುವ ಕಾರ್ಯದಲ್ಲಿಯೇ ನಿರತವಾಗಿರಬೇಕೆಂಬ ದಾಸರ ಆಶಯವನ್ನು ಈ ಪದ್ಯದಲ್ಲಿ ನೋಡಬಹುದು.

**ಅಧೋಕ್ಷಜನ ಸಿರಿ ಚರಣ ಜಲರುಹದೊಳು ಅಳಿಯಂತೆ –** ನಾರಾಯಣನ ಅಡಿದಾವರೆಗಳಲ್ಲಿ ದುಂಬಿಯಂತೆ.

**ಸಲೆ –** ಚೆನ್ನಾಗಿ.

**ಅಚ್ಯುತನ ಕಥೆ** = ಹರಿ ಕೀರ್ತನ

**ಹರಿ ಯಾತ್ರೆ** = ವಿಷ್ಣು ಮೂರ್ತಿಗಳಿರುವ ಪವಿತ್ರ ಕ್ಷೇತ್ರ ಯಾತ್ರೆ.

**Classification:** Keerthane
**Ankita:** sri purandara vittala
**Location:** NA
**Category:** Bhakti
**Sub-Category:** nalige, Krishna, keshava, anghri, mana, kai, sridhara, kivi, achyuta, kannu, mukunda, tulasi, padma, deha,
**Pravachana:** NA
**Explanation:** NA